**SET-4**

**Series ЄABA€/C**

**Q.P. Code 15**

Roll No.

Candidates must write the Q.P. Code on the title page of the answer-book.

- ಈ ಪ್ರಶ್ನೆ ಪತ್ರಿಕೆಯಲ್ಲಿ **6** ಮುದ್ರಿತ ಪುಟಗಳಿವೆಯೆಂಬುದನ್ನು ಪರಿಶೀಲಿಸಿ.
- ಪ್ರಶ್ನೆ ಪತ್ರಿಕೆಯ ಬಲಭಾಗದಲ್ಲಿ ಕೊಟ್ಟಿರುವ ಕೋಡ್ ಸಂಖ್ಯೆಯನ್ನು ಉತ್ತರ ಪತ್ರಿಕೆಯ ಮುಖ ಪುಟದಲ್ಲಿ ಅಭ್ಯರ್ಥಿಯು ಬರೆಯಬೇಕು.
- ಈ ಪ್ರಶ್ನೆ ಪತ್ರಿಕೆಯಲ್ಲಿ **11** ಪ್ರಶ್ನೆಗಳಿವೆ ಎಂಬುದನ್ನು ಗಮನಿಸಿ.
- **ಉತ್ತರಿಸುವುದಕ್ಕೆ ಮೊದಲು ಪ್ರಶ್ನೆಯ ಕ್ರಮ ಸಂಖ್ಯೆಯನ್ನು ಉತ್ತರ ಪತ್ರಿಕೆಯಲ್ಲಿ ಬರೆಯಿರಿ.**
- ಈ ಪ್ರಶ್ನೆ ಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳನ್ನು ಕೊಡಲಾಗಿದೆ. ಪ್ರಶ್ನೆ ಪತ್ರಿಕೆಯನ್ನು 10.15 a.m. ಗೆ ವಿತರಿಸಲಾಗುವುದು. 10.15 a.m. ನಿಂದ 10.30 a.m. ರ ತನಕ ವಿದ್ಯಾರ್ಥಿಗಳು ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಬೇಕು ಮತ್ತು ಈ ಅವಧಿಯಲ್ಲಿ ಯಾವುದೇ ಉತ್ತರವನ್ನು ಉತ್ತರ ಪತ್ರಿಕೆಯಲ್ಲಿ ಬರೆಯಬಾರದು.
- Please check that this question paper contains **6** printed pages.
- Q.P. Code given on the right hand side of the question paper should be written on the title page of the answer-book by the candidate.
- Please check that this question paper contains **11** questions.
- **Please write down the serial number of the question in the answer-book before attempting it.**
- 15 minute time has been allotted to read this question paper. The question paper will be distributed at 10.15 a.m. From 10.15 a.m. to 10.30 a.m., the students will read the question paper only and will not write any answer on the answer-book during this period.

# ಕನ್ನಡ

# KANNADA

*ಅನುಮತಿಸಲಾದ ಸಮಯ : 2 ಗಂಟೆ* | *ಗರಿಷ್ಠ ಅಂಕಗಳು : 40*

*Time allowed : 2 hours* | *Maximum Marks : 40*



collegedunia
India's largest Student Review Platform

***ಸೂಚನೆಗಳು:***

| | | |
|---|---|---|
| *(i)* | *ವಿಭಾಗ* ***A*** *ವಾಚನ ಮತ್ತು ಗ್ರಹಿಕಾ ಕೌಶಲ್ಯ* | *4 ಅಂಕಗಳು* |
| *(ii)* | *ವಿಭಾಗ* ***B*** *ಅನ್ವಯಿಕ ವ್ಯಾಕರಣ* | *6 ಅಂಕಗಳು* |
| *(iii)* | *ವಿಭಾಗ* ***C*** *ವಾಚನ ಮತ್ತು ಗ್ರಹಿಕಾ ಕೌಶಲ್ಯ* | *4 ಅಂಕಗಳು* |
| *(iv)* | *ವಿಭಾಗ* ***D*** *ಪಠ್ಯಗಳ ಅಧ್ಯಯನ* | *16 ಅಂಕಗಳು* |
| *(v)* | *ವಿಭಾಗ* ***E*** *ಸೃಜನಶೀಲ ಬರವಣಿಗೆ ಮತ್ತು ಸಂಕ್ಷಿಪ್ತ ಕವಿ ಪರಿಚಯ* | *10 ಅಂಕಗಳು* |

## ವಿಭಾಗ A
## (ವಾಚನ ಮತ್ತು ಗ್ರಹಿಕಾ ಕೌಶಲ) : 4 ಅಂಕಗಳು

**1.** ಕೆಳಗಿನ ಗದ್ಯಭಾಗ ಓದಿ, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ :

ಮನುಷ್ಯ ತನ್ನ ಪೂರ್ಣ ಮಾನವ ಸಾಮರ್ಥ್ಯ ಗಳಿಸಿಕೊಳ್ಳಲು ಸಮಾನತೆಯುಳ್ಳ ಮತ್ತು ನ್ಯಾಯಸಂಗತವಾದ ಸಮಾಜವೊಂದನ್ನು ಅಭಿವೃದ್ಧಿ ಪಡಿಸಲು ಹಾಗೂ ರಾಷ್ಟ್ರದ ಏಳಿಗೆಯನ್ನು ಸಾಧಿಸಲು ಮೂಲಭೂತವಾಗಿ ಶಿಕ್ಷಣ ಅವಶ್ಯಕವಾಗಿದೆ. ಗುಣಾತ್ಮಕವಾದ ಶಿಕ್ಷಣಕ್ಕೆ ಸಾರ್ವತ್ರಿಕ ನೆಲೆಗಟ್ಟಿನಲ್ಲಿ ಅವಕಾಶಗಳ ಬಾಗಿಲು ತೆರೆಯುವುದು ಹಾಗೂ ಆರ್ಥಿಕ ಪ್ರಗತಿ, ಸಾಮಾಜಿಕ ನ್ಯಾಯ ಮತ್ತು ಸಮಾನತೆ, ವೈಜ್ಞಾನಿಕ ಮುನ್ನಡೆ, ರಾಷ್ಟ್ರೀಯ ಏಕತೆ ಹಾಗೂ ಸಾಂಸ್ಕೃತಿಕ ಸಂರಕ್ಷಣೆ ಇವುಗಳ ಮೂಲಕ ಜಾಗತಿಕ ಮುಂದಾಳುತನವನ್ನು ಸಾಧಿಸುವುದು ಭಾರತದ ನಿರಂತರ ಮುನ್ನಡೆಯ ಕೀಲಿಕೈ ಆಗಿದೆ. ವ್ಯಕ್ತಿಯ, ಸಮಾಜದ, ದೇಶದ ಹಾಗೂ ಸಮಸ್ತ ಪ್ರಪಂಚದ ಒಳಿತನ್ನು ಸಾಧಿಸಬೇಕಾದರೆ ಸಾರ್ವತ್ರಿಕ ಉನ್ನತ ಶಿಕ್ಷಣದ ಮೂಲಕ ನಮ್ಮ ದೇಶದ ಶ್ರೀಮಂತವಾದ ಕೌಶಲಗಳನ್ನು ಮತ್ತು ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸಿ, ಗರಿಷ್ಠ ಪ್ರಮಾಣದಲ್ಲಿ ಬಳಕೆ ಮಾಡಿಕೊಳ್ಳುವುದು ಅತ್ಯುತ್ತಮ ಮಾರ್ಗವಾಗಿದೆ. ಮುಂದಿನ ದಶಕದ ವೇಳೆಗೆ ಇಡೀ ಪ್ರಪಂಚದಲ್ಲೇ ಗರಿಷ್ಠ ಪ್ರಮಾಣದಲ್ಲಿ ಯುವ ಜನಾಂಗವನ್ನು ಭಾರತ ಹೊಂದಲಿದ್ದು ಅವರಿಗೆ ಅತ್ಯುನ್ನತವಾದ ಶಿಕ್ಷಣ ಸೌಲಭ್ಯಗಳನ್ನು ನಾವು ಎಷ್ಟರ ಮಟ್ಟಿಗೆ ಒದಗಿಸಿ ಕೊಡ ಬಲ್ಲೆವು ಎಂಬುದರ ಮೇಲೆ ನಾಡಿನ ಭವಿಷ್ಯ ತೀರ್ಮಾನವಾಗಲಿದೆ.



collegedunia.com
India's largest Student Review Platform

ಸುಸ್ಥಿರ ಬೆಳವಣಿಗೆ ಕಾರ್ಯಸೂಚಿ 2030 ಇದರ ಗುರಿ 4 ರಲ್ಲಿ ಪ್ರಸ್ತಾಪಿಸಲಾಗಿರುವ ಜಾಗತಿಕ ಶಿಕ್ಷಣ ಬೆಳವಣಿಗೆ ಕಾರ್ಯ ಸೂಚಿಯನ್ನು ಭಾರತ 2015 ರಲ್ಲಿ ಅಳವಡಿಸಿಕೊಂಡಿದ್ದು, ಇದು 2030 ರ ವೇಳೆಗೆ ಪ್ರತಿಯೊಬ್ಬರಿಗೂ ಸಮಾವಿಷ್ಟವಾದ ಮತ್ತು ಸಮಾನವಾದ ಉತ್ತಮ ಗುಣಮಟ್ಟದ ಶಿಕ್ಷಣವನ್ನು ಒದಗಿಸುವ ಹಾಗೂ ಜೀವನ ಪರ್ಯಂತ ಕಲಿಕೆಯ ಸದಾವಕಾಶಗಳನ್ನು ಖಾತರಿಯಾಗಿ ಒದಗಿಸಿಕೊಡುವ ಉದ್ದೇಶವನ್ನು ಹೊಂದಿದೆ. ಇಂಥ ಉನ್ನತ ಗುರಿಸಾಧನೆ ಮಾಡಬೇಕಾದರೆ 2030 ರ ಕಾರ್ಯಸೂಚಿಯ ಎಲ್ಲ ಮಹತ್ವಪೂರ್ಣವಾದ ಉದ್ದೇಶಗಳನ್ನು ಮತ್ತು ಗುರಿಗಳನ್ನು ಸಾಧಿಸಲು ಸಾಧ್ಯವಾಗುವಂತೆ ಕಲಿಕೆಯನ್ನು ಪೋಷಿಸಿ ಅದಕ್ಕೆ ಬೆಂಬಲ ನೀಡಲು ಸಮರ್ಥವಾಗುವಂತೆ ನಮ್ಮ ಇಡೀ ಶಿಕ್ಷಣ ವ್ಯವಸ್ಥೆಯನ್ನು ಮರುವಿನ್ಯಾಸ ಮಾಡಬೇಕಾಗಿದೆ.

**ಪ್ರಶ್ನೆಗಳು :**

(i) ಮನುಷ್ಯನಿಗೆ ಶಿಕ್ಷಣ ಏಕೆ ಅವಶ್ಯಕವಾಗಿದೆ ? 2

(ii) ಯಾವುದರ ಮೇಲೆ ನಾಡಿನ ಭವಿಷ್ಯ ತೀರ್ಮಾನವಾಗಲಿದೆ ? 2

## ವಿಭಾಗ B

## ಅನ್ವಯಿಕ ವ್ಯಾಕರಣ : (6 ಅಂಕಗಳು)

**2.** ಕೆಳಗಿನ ವಾಕ್ಯ ಪ್ರಕಾರವನ್ನು ತಿಳಿಸಿ, ಭವಿಷ್ಯತ್ ಕಾಲಕ್ಕೆ ಪರಿವರ್ತಿಸಿ : 2

ಅವಳು ನಾಳೆ ಊರಿಗೆ ಹೋಗುವುದಿಲ್ಲ

**3.** ಯಾವುದಾದರೂ ಒಂದು ಗಾದೆ ಮಾತನ್ನು ವಿಸ್ತರಿಸಿ ಬರೆಯಿರಿ : 2

(i) ಕುಂಬಾರನಿಗೆ ವರುಷ; ದೊಣ್ಣೆಗೆ ನಿಮಿಷ

(ii) ಕೂತು ಉಂಡರೆ, ಕುಡಿಕೆ ಹೊನ್ನು ಸಾಲದು



collegedunia
India's largest Student Review Platform

**4.** ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಂಗಡಣೆ ಮಾಡಿ, ಛಂದಸ್ಸಿನ ಹೆಸರು ತಿಳಿಸಿ : *2*

ರಾವಣನ ರೂಪು ಸೀತಾ
ದೇವಿಗೆ ತೃಣಕಲ್ಪಮಾಯ್ತು ಪತಿಭಕ್ತಿಯೊಳಾ

**ಅಥವಾ**

ಹೆಣ್ಣು ಹರಿಬಕ್ಕೋಸುಗವೆ ತ
ಮ್ಮಣ್ಣನಾಜ್ಞೆಯ ಮೀರಿ ಕುಂತಿಯ
ಚಿಣ್ಣ ಬದುಕಿದನೆಂದು ನುಡಿವರು ಕುಜನರಾದವರು

## ವಿಭಾಗ C

## ವಾಚನ ಮತ್ತು ಗ್ರಹಿಕಾ ಕೌಶಲ್ಯ : (4 ಅಂಕಗಳು)

**5.** ಕೆಳಗಿನ ಪದ್ಯ ಓದಿ, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ :

ಜಾಲಿಯ ಮರದಂತೆ

ಜಾಲಿಯ ಮರದಂತೆ ಧರೆಯೊಳು ದುರ್ಜನರು ||ಪ||
ಮೂಲಾಗ್ರ ಪರಿಯಂತ ಮುಳ್ಳು ಕೂಡಿಪ್ಪಂತೆ
ಬಿಸಿಲಲ್ಲಿ ಬಳಲಿ ಬಂದವರಿಗೆ ನೆರಳಿಲ್ಲ
ಹಸಿದು ಬಂದವರಿಗೆ ಹಣ್ಣು ಇಲ್ಲ
ಕುಸುಮ ವಾಸನೆಯಿಲ್ಲ ಕೂಡಲು ಸ್ಥಳವಿಲ್ಲ
ರಸದಲ್ಲಿ ಸ್ವಾದವು ವಿಷದಂತೆ ಇರುತಿಹ ||೧||

ಊರಹಂದಿಗೆ ಷಡ್ರಸಾನ್ನವನಿಕ್ಕಲು
ನಾರುವ ದುರ್ಗಂಧ ಬಿಡಬಲ್ಲುದೆ
ಘೋರಪಾಪಿಗೆ ತತ್ವಜ್ಞಾನವ ಪೇಳಲು
ಕ್ರೂರ ಕರ್ಮವ ಬಿಟ್ಟು ಸುಜನನಾಗುವನೆ ||೨||



collegedunia India's largest Student Review Platform

ತನ್ನಿಂದ ಉಪಕಾರ ತೊಟಕಾದರೂ ಇಲ್ಲ
ಬಿನ್ನಾಣದ ಮಾತಿಗೆ ಕೊನೆಯಿಲ್ಲ
ಅನ್ನಕ್ಕೆ ಸೇರಿದ ಕುನ್ನಿ ಮಾನವರಂತೆ
ಇನ್ನಿವರ ಕಾರ್ಯವು ಪುರಂದರ ವಿಠಲ ||೩||

**ಪ್ರಶ್ನೆಗಳು :**

(i) ಜಾಲಿಯ ಮರದ ನಿರುಪಯುಕ್ತತೆಯನ್ನು ಪುರಂದರದಾಸರು ಹೇಗೆ ನಿರೂಪಿಸಿದ್ದಾರೆ ? *2*

(ii) ಯಾರಿಗೆ ಷಡ್ರಸಾನ್ನವನಿಕ್ಕಿ ಉಪಯೋಗವಿಲ್ಲ? ಏಕೆ ? *2*

## ವಿಭಾಗ D

## ಪಠ್ಯಗಳ ಅಧ್ಯಯನ (ಗದ್ಯ, ಪದ್ಯ ಮತ್ತು ದೀರ್ಘಗದ್ಯ) : (16 ಅಂಕಗಳು)

**6.** ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ : *3×2=6*

(i) ಶಿಲುಬೆಗೇರಿಸಿದವರ ಗುಣಗಳು ಇಂದು ಯಾವ ವೇಷ ತಾಳಿವೆ ?

(ii) ಕಲಾಂ ಮೇಷ್ಟ್ರು ಹೇಳಿದ ಯಶಸ್ಸಿನ ಪಂಚಾಕ್ಷರಿ ಮಂತ್ರ ಯಾವುದು ?

**ಅಥವಾ**

ಕತೆಯನ್ನು ಯಾವ ಧಾಟಿಯಲ್ಲಿ ಹೇಳೆಂದು ಮನೋರಮೆ ಕೇಳಿದಳು ?

(iii) ಅರಣ್ಯ ಇಲಾಖೆಯವರು ನಾಗರಾಜನನ್ನು ಕುರಿತು ಏನೆಂದು ಜಾಹೀರಾತು ನೀಡಿದರು ?

**7.** ಸಂದರ್ಭ ಸಹಿತ ಸ್ವಾರಸ್ಯ ಬರೆಯಿರಿ : *2×3=6*

(i) ಕಲಿ ಭೀಮನೇ ಮಿಡುಕುಳ್ಳ ಗಂಡನು

**ಅಥವಾ**

ಗಂಜಿಗೂ ಗತಿಯಿಲ್ಲ

(ii) ಮಗುವೇ ಮೊದಲ ವಿಜ್ಞಾನಿ.



collegedunia India's largest Student Review Platform

8. ಹತ್ತು ವಾಕ್ಯಗಳಲ್ಲಿ ಉತ್ತರಿಸಿ : *1×4=4*

ವೇಲಾಯುಧನ ಹೆಂಡತಿಗೆ ಆನೆಯ ಬಗ್ಗೆ ಸವತಿ ಮಾತ್ಸರ್ಯ ಮೂಡಲು ಕಾರಣಗಳೇನು ?

## ವಿಭಾಗ E

### ಸೃಜನಶೀಲ ಬರವಣಿಗೆ ಮತ್ತು ಸಂಕ್ಷಿಪ್ತ ಕನ್ನಡ ಸಾಹಿತ್ಯ ಚರಿತ್ರೆ (ಕವಿ, ಕೃತಿ ಹಿನ್ನೆಲೆಯಲ್ಲಿ) : (10 ಅಂಕಗಳು)

9. ಕೆಳಗಿನವುಗಳಲ್ಲಿ ಒಂದನ್ನು ಕುರಿತು ನಿಮ್ಮ ಅನುಭವ ಬರೆಯಿರಿ : *1×4=4*

(i) ನಿಮ್ಮ ಊರು ಪ್ರವಾಹದ ವಿಕೋಪಕ್ಕೆ ತುತ್ತಾದಾಗ .....

(ii) ನಿಮಗೆ ಅನಿರೀಕ್ಷಿತ ಅದೃಷ್ಟ ಒಲಿದು ಬಂದಾಗ .....

10. ನಿಮ್ಮ ಊರಿನಲ್ಲಿ ಬಸ್ಸಿನ ಸೌಕರ್ಯ ಸರಿಯಿಲ್ಲದಿರುವ ಕಾರಣ ಸಾರ್ವಜನಿಕರು ಎದುರಿಸುತ್ತಿರುವ ಸಮಸ್ಯೆಗಳನ್ನು ವಿವರಿಸಿ ಪತ್ರಿಕಾ ಸಂಪಾದಕರಿಗೆ ಒಂದು ಪತ್ರ ಬರೆಯಿರಿ. *1×4=4*

11. ಕವಿ–ಕೃತಿ ಪರಿಚಯ ಬರೆಯಿರಿ (ಬೇಕಾದ ಒಬ್ಬರನ್ನು ಕುರಿತು) : *1×2=2*

(i) ಬಸವಣ್ಣ

(ii) ಹಾ.ಮಾ. ನಾಯಕ



collegedunia.com India's largest Student Review Platform